‘ಅಪಾರ್ಥ ಮಾಡ್ಕೋಬೇಡ. ಈ ಪಾರ್ಟಿ ಹಾಳು ಮಾಡೋಕೆ ಬಂದಿಲ್ಲ. ಈ ಸಮಯದಲ್ಲಿ ಇಂತಹ ಪಾರ್ಟಿ ಇದೇ ಅಂದ್ರೆ... ಆಶ್ಚರ್ಯದಿಂದ ಕೇಳಿದೆ’ ಅವನಿಂದ ಕೈ ಬಿಡಿಸಿಕೊಂಡು ಹಿಂದಕ್ಕೆ ಹೆಜ್ಜೆ ಹಾಕಿದವಳು ಅವನನ್ನು ದುರುಗುಟ್ಟಿಕೊಂಡು ನೋಡಿದಳು.

‘ನನ್ನ ತಂದೆ ನಿನಗೆ ಆಹ್ವಾನ ಕೊಡದಿರುವುದು ಇದಕ್ಕೇನೆ. ಈಗ ನಂಗರ್ಥವಾಯಿತು’

‘ಅದಕ್ಕಲ್ಲ, ನಾನೆಲ್ಲಿ ಅವನ ಮುದ್ದಿನ ಮಗಳನ್ನು ಎಗರಿಸಿಕೊಂಡು ಹೋಗುತ್ತೇನೇಂತ ಹೆದರಿಕೆ’

ಅವಳ ಕಣ್ಣುಗಳಲ್ಲಿದ್ದ ಜ್ವಾಲೆ ಆರಿದಂತೆ ಕಂಡಿತು. ಸಮಾಧಾನದ ಉಸಿರು ದಬ್ಬಿದಳು.

‘ರಿಯಲೀ! ಕಿರಣ್, ನೀನು ನನ್ನನ್ನ ಅಷ್ಟೊಂದು ಪ್ರೀತಿಸ್ತಿದ್ದೀಯಾ?’ ಭಾವುಕತೆಯ ಮಾತು ಹೊರಟಿತು.

‘ಮೇನಕಾ, ನಿನ್ನ ಪ್ರಶ್ನೆ ಅನಗತ್ಯ. ನನ್ನ ಬಗ್ಗೆ ಗೊತ್ತಿದ್ದೂ ನೀನು ಈ ರೀತಿಯ ಪ್ರಶ್ನೆ ಹಾಕೋದು ಸರೀನಾ?’

ಮೇನಕಾಳ ಕಣ್ಣುಗಳಲ್ಲಿ ನೀರು ಜಿನುಗಿತು.

‘ಮತ್ತೆ ಲಹರಿ?’

‘ಮರ್ತು ಬಿಡು. ಲಹರಿ ನೆನಪಷ್ಟೆ. ನಿನ್ನಿಂದ ನಾನೆಂದು ದೂರವಾಗಲಾರೆ. ನಡಿ, ನೀನೆಲ್ಲೋ ಮೇಲೆ ಹೋಗ್ತಾ ಇದ್ದೆ, ನಾನು ಜೊತೆಗೆ ಬರುತ್ತೇನೆ’

ಹೆಜ್ಜೆ ಮುಂದಿಟ್ಟರು.

ಆ ಕ್ಷಣಕ್ಕೆ ಧ್ವನಿವರ್ಧಕ ಹಾಡು ನಿಲ್ಲಿಸಿತು. ಪಾರ್ಟಿಯ ಗದ್ದಲವೂ ಅಡಗಿತು. ಎಲ್ಲರ ದೃಷ್ಟಿಯೂ ಬಾಗಿಲಿನ ಕಡೆಗೆ.

ಭುಜಂಗೇಶರಾಯರು ಒಳಗೆ ಬರುತ್ತಿದ್ದರು. ಅವರ ಮುಖದಲ್ಲಿ ಮುಗುಳ್ನಗುವಿತ್ತು. ಮೇನಕಾ ಕಿರಣನನ್ನು ಅಲ್ಲಿಯೇ ಬಿಟ್ಟು ಓಡು ನಡುಗೆಯಲ್ಲಿ ಅವರತ್ತ ನಡೆದಳು. ರಾಯರ ಮುಖ ಮತ್ತಷ್ಟು ಅರಳಿತು. ಮಗಳನ್ನು ತಬ್ಬಿಕೊಂಡರು.

ಪಾರ್ಟಿಯಲ್ಲಿ ದಂತದ ಗೊಂಬೆಯಂತೆ ಗೋಚರಿಸುತ್ತಿದ್ದವಳ ಮೇಲೆ ಎಲ್ಲರ ದೃಷ್ಟಿ!

ತಂದೆಯ ಕೈಯನ್ನು ಹಿಡಿದುಕೊಂಡು ಮೆಟ್ಟಿಲುಗಳತ್ತ ನಡೆದಳು. ಕಿರಣ ಬೆಪ್ಪನಂತೆ ದೂರವೇ ನಿಂತಿದ್ದ.

‘ಪಪ್ಪಾ, ಈ ಕಡೆಗೆ ಬನ್ನಿ’ ಕಿರಣನತ್ತ ನಡೆದಳು.

ಭುಜಂಗೇಶರಾಯರ ನೋಟ ದೂರದಲ್ಲಿ ನಿಂತಿದ್ದ ಯುವಕನತ್ತ ಹರಿಯಿತು. ಮುಖ ಬಿಗಿದುಕೊಂಡಿತು.

‘ಓಹೋ! ಈ ಅಯೋಗ್ಯನಿಗೆ ನೀನು ಆಹ್ವಾನ ನೀಡಿದ್ದೀಯಾ?’

ಮೇನಕಾ ನಕಾರಾತ್ಮಕವಾಗಿ ತಲೆಯಲುಗಿಸಿದವಳು ಸಾವರಿಸಿಕೊಂಡು, ‘ಹೌದು’ ಅನ್ನುವಂತೆ ಗೋಣು ಆಡಿಸಿದಳು. ಭುಜಂಗೇಶರಾಯರ ಮುಖದಲ್ಲಿದ್ದ ಗಂಭೀರತೆ ಮಾಯವಾಯಿತು. ಮೇನಕಾ ಕಣ್ಸನ್ನೆಯಲ್ಲಿಯೇ ಕಿರಣನನ್ನು ಹತ್ತಿರಕ್ಕೆ ಕರೆದಳು. ಅವನು ಹತ್ತಿರಕ್ಕೆ ಬಂದು ನಿಂತು ಕೈ ಜೋಡಿಸಿದ. ಭುಜಂಗೇಶರಾಯರು ಪ್ರತಿಕ್ರಿಯಿಸದೆ ಅವನನ್ನೇ ದಿಟ್ಟಿಸುತ್ತಾ ನಿಂತರು. ಕಿರಣನ ನೋಟವು ಅವರ ಕಣ್ಣುಗಳನ್ನೇ ದೃಷ್ಟಿಸಿತು.

‘ಮೇಲಕ್ಕೆ ಬಾ’ ಅವನನ್ನು ಕರೆದು ಮೆಟ್ಟಿಲೇರಿ ಹೋದರು. ಕಿರಣ ಮೇನಕಾಳತ್ತ ನೋಡಿದ.

‘ಅವಾಂತರ ಆಗೋದು ಬೇಡ. ಪಪ್ಪಾ ಹೇಳಿದಕ್ಕೆಲ್ಲಾ ತಲೆಯಲುಗಿಸಿದರೆ ಸಾಕು. ತಪ್ಪಿಯೂ ಲಹರಿಯ ವಿಷಯ ಎತ್ಬೇಡ’ ಪ್ರೇಮಿಯ ಕಿವಿಯಲ್ಲುಸುರಿ ಅವನ ಜೊತೆಗೆ ಮೆಟ್ಟಲೇರಿದಳು.

ಮೇಲಂತಸ್ತಿನ ಕೋಣೆಯೊಳಗೆ ಹೊಕ್ಕು ವಿಧೇಯತನ ತೋರಿಸಿದ ಕಿರಣ. ಕಿಟಕಿಯಾಚೆ ಮುಖ ಮಾಡಿ ನಿಂತಿದ್ದ ಅವನನ್ನು ಮನಸ್ಸಿನಲ್ಲಿಯೇ ಹಳಿದು ಕೊಂಡಂತಿತ್ತು ಅವರ ಭಾವನೆ.

‘ಮೇನಕಾ, ನೀನು ಕೆಳಗೆ ಹೋಗ್ಬಿಡು’ ಹೊರಗಿನಿಂದ ನೋಟ ಕದಲಿಸದೆ ನುಡಿದರು. ಆಜ್ಞೆಯನ್ನು ಪಾಲಿಸುವಂತೆ ಅವಳು ಹಿಂದಕ್ಕೆ ನಡೆದಳು.

‘ಕಿರಣ’ ರಾಯರ ನುಡಿ ಮೃದುವಾಗಿತ್ತು. ಕಿರಣ ಅವರ ಹತ್ತಿರಕ್ಕೆ ಹೋಗಿ ನಿಂತ.

‘ಲಹರಿ ಬಗ್ಗೆ ಏನಾದ್ರೂ...’ ಮಾತು ಕಟ್ಟಿತು. ಪ್ಯಾಂಟಿನ ಕಿಸೆಯಿಂದ ಕರವಸ್ತ್ರವನ್ನು ಹೊರ ತೆಗೆದರು. ಕನ್ನಡಕವನ್ನು ತೆಗೆದು ಒರೆಸಿಕೊಂಡು ಮತ್ತೆ ಮೂಗಿಗೇರಿಸಿಕೊಂಡರು.

‘ಪ್ರಯತ್ನ ಮಾಡ್ತಾ ಇದ್ದೇನೆ. ಇಲ್ಲಿಯವರೆಗೆ ಏನೂ ಮಾಹಿತಿಯಿಲ್ಲ’ ದೃಢವಾದ ಸ್ವರದಲ್ಲಂದ.

‘ಕಿರಣಾ’ ಪ್ರೀತಿಯ ಕರೆ ಕೇಳಿತು.

ತಕ್ಷಣವೇ ಇಬ್ಬರ ನೋಟವೂ ಬಾಗಿಲತ್ತ ಸರಿಯಿತು.

ಆಕೆ ಬಹಳಷ್ಟು ನಿರೀಕ್ಷೆಗಳನ್ನಿಟ್ಟುಕೊಂಡಂತೆ ಅವನತ್ತ ಬರುತ್ತಿದ್ದರು. ಆಕೆಯನ್ನು ನೋಡುತ್ತಲೇ ರಾಯರ ಮುಖ ಪೇಲವವಾಯಿತು.

ಕಿರಣ ಆಕೆಯತ್ತ ನಡೆದ!!

****

ಒಪ್ಪವಾಗಿ ತಲೆಗೂದಲನ್ನು ಒಟ್ಟು ಸೇರಿಸಿ ಸಿಂಬಿ ಸುತ್ತಿ ತಲೆಗೆ ಮಲ್ಲಿಗೆ ಹೂವು ಮುಡಿದು ನಿಂತಿದ್ದ ಆಕೆ ಕಿರಣನ ಕೈಗಳನ್ನು ಹಿಡಿದುಕೊಂಡು ಅತ್ತು ಬಿಟ್ಟರು.

‘ಆಪದ್ಬಾಂದವ ಕಣೋ ನೀನು’ ಮಾತಿನಲ್ಲಿ ಕೃತ್ರಿಮತೆ ಇರಲಿಲ್ಲ. ಕಣ್ಣುಗಳಲ್ಲಿಳಿದ ನೀರನ್ನು ತೊಡೆದುಕೊಂಡು ಮಾತು ಮುಂದುವರಿಸಿದರು.

‘ನೀನೆಲ್ಲಿ ಮಾಯವಾಗಿ ಬಿಡ್ತೀಯೋ ಅಂದುಕೊಂಡಿದ್ದೆ. ನನಗಿಲ್ಲಿ ಯಾರೂ ಸಾಂತ್ವನ ನೀಡುವವರಿಲ್ಲ’ ಮಾತಿನ ಕೊನೆಯಲ್ಲಿ ಭುಜಂಗೇಶರಾಯರತ್ತ ಅವರ ನೋಟವಿತ್ತು. ಆ ನೋಟದಲ್ಲಿ ತಿರಸ್ಕಾರದ ಭಾವವೂ ಇದ್ದಂತೆ ಕಂಡಿತು ಕಿರಣನಿಗೆ. ಸೊಲ್ಲೆತ್ತದೆ ನಿಂತಿದ್ದ ರಾಯರನ್ನು ಕಂಡು ಕಿರಣನಿಗೂ ಆಶ್ಚರ್ಯ!

‘ನಿಂಗೆ ಪಾರ್ಟಿಗೆ ಆಹ್ವಾನ ಇಲ್ಲಾಂತ ನನಗೂ ಗೊತ್ತು. ಪಪ್ಪ ಮಗಳು ಸೇರಿ ಏನೇನೋ ಗೊಂದಲಗಳನ್ನು ಸೃಷ್ಟಿಸುತ್ತಿದ್ದಾರೆ. ದಯವಿಟ್ಟು ನೀನು ಈ ಮನೆಗೆ ಬರ್ತಾ ಇರಬೇಕು’ ಕಿರಣ ತಟಸ್ಥನಂತೆ ನಿಂತಿದ್ದ. ಅತ್ತ ರಾಯರನ್ನು ಸಮಾಧಾನಿಸಬೇಕು ಇತ್ತ ಅವರ ಮಡದಿ ಕಾಶಮ್ಮನನ್ನು ಸಾಂತ್ವನಿಸಬೇಕು. ಅಡ ಕತ್ತರಿಯಲ್ಲಿ ಸಿಕ್ಕಿಕೊಂಡ ಅನುಭವವಾಯಿತು. ಪಾರ್ಟಿಗೆ ಆಹ್ವಾನವೇ ಇಲ್ಲದವನು ಲಹರಿಯ ಬಗ್ಗೆ ತಿಳಿದುಕೊಳ್ಳುವ ಕಾತುರದಿಂದ ಬಂದಿದ್ದ.

ಹೊರಗೆ ನಿಂತಿದ್ದ ದುಬಾರಿ ಕಾರುಗಳು, ಒಳಗೆ ಸೇರಿದ ಶ್ರೀಮಂತ ಜನರು, ಹಬ್ಬದ ವಾತವರಣವನ್ನು ಕಂಡು ಕ್ಷಣ ಹೊತ್ತು ಅಧೀರನಾಗಿದ್ದ. ಲಹರಿಯ ಕಣ್ಮರೆಯ ಹಿಂದೆಯೇ ಇಂತಹ ಅದ್ದೂರಿ ಪಾರ್ಟಿಯ ಅವಶ್ಯಕತೆಯೇನು? ಒಳಗೆ ನಡೆಯದೆ ಕುತೂಹಲ ತಣಿಯದು. ಅದಕ್ಕಾಗಿಯೇ ಸೆಕ್ಯುರಿಟಿಯಾತ ತಡೆಯುವಾಗಲೂ ಅವನನ್ನು ತಳ್ಳಿಕೊಂಡು ಒಳಗೆ ಬಂದಿದ್ದ. ಅದೃಷ್ಟಕ್ಕೆ ಭುಜಂಗೇಶರಾಯರ ಸುಳಿವಿರಲಿಲ್ಲ. ಆ ಗಲಾಟೆಯಲ್ಲಿ ಕಾಶಮ್ಮನನ್ನೂ ಕಂಡಂತಿರಲಿಲ್ಲ. ಪಾರ್ಟಿ ಹಾಲ್‌ಗೆ ಬರುವಾಗ ಜನರೆಲ್ಲಾ ಸಂಗೀತದ ಉನ್ಮಾದಕ್ಕೆ ಸೆಳೆದವರಂತೆ ಇದ್ದರು. ಅದೂ ಅವನಿಗೆ ಅನುಕೂಲವೇ.

ಒಳಗೆ ಬಂದು ಸುತ್ತಲೂ ಕಣ್ಣಾಡಿಸುವಾಗ ಕಂಡವಳು ಮೇನಕಾ. ಲಹರಿಯ ಬಗ್ಗೆ ಮಾತ್ಸರ್ಯದ ಮೊಟ್ಟೆ ಒಡೆಸಿಕೊಂಡವಳು. ಈಗ ಲಹರಿ ಇಲ್ಲದ್ದು ಅವಳಿಗೆ ಅನುಕೂಲವೆ! ಸ್ವೇಚ್ಛೆಯ ಬದುಕು ಅವಳದ್ದಾಗಬೇಕೆನ್ನುವ ಹಠಮಾರಿ ಹೆಣ್ಣು. ತನ್ನಿಂದ ಏನನ್ನಾದರೂ ಲಹರಿ ಕಸಿದುಕೊಳ್ಳುವಳೆನ್ನುವ ಭೀತಿ. ಆ ಭೀತಿಯಲ್ಲಿಯೇ ಲಹರಿಗೆ ಅಪಾಯ ತಂದೊಡ್ಡುವ ಸಾಧ್ಯತೆಯೂ ಇತ್ತು. ಹಾಗಾಗಲಿಲ್ಲ...

ಲಹರಿ ಆಕರ್ಷಿತಳಾಗಿದ್ದು ಮರಳು ದಿಣ್ಣೆಯ ಸೆಳೆತಕ್ಕೆ. ಅಲ್ಲಿಯ ತಂಗಾಳಿಗೆ. ಪದೇ ಪದೇ ಕಡಲತೀರಕ್ಕೆ ಒಂಟಿಯಾಗಿ ಹೋಗಿ ತಾಸುಗಟ್ಟಲೆ ಕಳೆಯುವ ಹುಚ್ಚು ಹುಡುಗಿ. ಅದೆಷ್ಟೋ ಬಾರಿ ಭುಜಂಗೇಶರಾಯರು ಮಗಳ ವರ್ತನೆಗೆ ಕಳವಳಗೊಂಡದ್ದಿದೆ. ಆ ಹೊತ್ತಿಗೇನೆ ಅವಳ ಕಣ್ಮರೆ!

ಹೀಗೆ ಯೋಚಿಸುತ್ತಿರುವಾಗಲೇ ಏನೂ ನಡೆದಿಲ್ಲವೆನ್ನುವಂತೆ ಮರಳ ತುಣುಕುಗಳನ್ನು ಮೈಗೆ ಅಂಟಿಸಿಕೊಂಡಂತೆ ಮರಳುತ್ತಿದ್ದ ಮೀನಿನಂತಹ ಹುಡುಗಿ. ಸಂಶಯದ ಗೂಡು ಕಟ್ಟಿಕೊಂಡ ರಾಯರಿಗೆ ಆತಂಕ, ಭಯ ಜೊತೆಗೆ ಮಾತನಾಡದ ಸ್ಥಿತಿ. ಕರೆದು ವಿಚಾರಿಸುವ ಮನಸ್ಸಿಲ್ಲ. ಅಪಾರ್ಥಕ್ಕೆಡೆ ಮಾಡಿಕೊಂಡು ಮಗಳು ದೂರವಾಗುವ ಭಯ. ಕಾಶಮ್ಮನ ಜೊತೆಗೆ ವಾಗ್ವಾದಕ್ಕೆ ಮಗಳು ನಿಂತಾಗ ರಾಯರು ಮಗಳ ಪರ. ಅದೇ ಈಗ ಸಮಸ್ಯೆಗೆ ಹೇತು. ಆಗಲೇ ಮಗಳನ್ನು ವಿಚಾರಿಸುತ್ತಿದ್ದರೆ ಈ ಸಂದರ್ಭ ಎದುರಾಗುತ್ತಿರಲಿಲ್ಲ. ಪ್ರೀತಿಯ ಮಗಳನ್ನು ಕಳೆದುಕೊಂಡವರ ಮುಖದಲ್ಲಿ ನೋವಿನ ಗೆರೆಗಳು ಸ್ಪಷ್ಟವಾಗಿ ಮೂಡಿದ್ದವು.